ಇದೆ. ಅವರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಅವರ ಕಛೇರಿಯಿಂದ ನಿವೇಶನಗಳನ್ನು ಕೊಡಿಸುತ್ತೇವೆ.

ಕೆ.ಜಿ.ಎಫ್. ನಲ್ಲಿ ಕುಡಿಯುವ ನೀರಿನ ಅಭಾವ

೬೧೮. ಶ್ರೀ ಟಿ. ಎಸ್. ಮಣಿ (ಕೆ.ಜಿ.ಎಫ್.).–ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ ಎಫ್‌ನಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ?

ಇ) ಬೇತಮಂಗಲ ನೀರು ಸರಬರಾಜು ಕೇಂದ್ರದಲ್ಲಿ ಒಂದು ಡೀಸೆಲ್‌ನ ವಿದ್ಯುಚ್ಛಕ್ತಿ ಜನಕ ಯಂತ್ರವಿದ್ದರೂ ಸಹಿತ ಕಳೆದ ಹತ್ತು ತಿಂಗಳಿಂದ ಅದನ್ನು ಅಳವಡಿಸಿ ಕಾರ್ಯಾಚರಣೆ ಪಡಿಸಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳು ?

ಉ) ಉಲ್ಲೇಖಿತ ಡೀಸೆಲ್ ವಿದ್ಯುತ್ ಜನಕ ಯಂತ್ರವನ್ನು ನೀರು ಸರಬರಾಜಿಗೆ ಬೇಕಾದ ವಿದ್ಯುಚ್ಛಕ್ತಿಯ ಕೊರತೆಯನ್ನು ಹೋಗಲಾಡಿಸಲು ಯಾವಾಗ ಅಳವಡಿಸಲಾಗುವುದು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) —

ಅ) ಹೌದು

ಆ) ನೀರು ಸರಬರಾಜು ಮಾಡಲು ವಿದ್ಯುಚ್ಛಕ್ತಿಯ ವೋಲ್ಟೇಜ್‌ನಲ್ಲಿ ಉಂಟಾಗಿರುವ ತೀವ್ರ ಏರಿಳಿತವು ಮತ್ತು ವಿದ್ಯುಚ್ಛಕ್ತಿ ಸರಬರಾಜು ಆಗಿಂದಾಗ್ಗೆ ಸ್ಥಗಿತಗೊಳ್ಳುವುದು ಕಾರಣವಾಗಿರುತ್ತದೆ.

ಇ) ಈ) ಮತ್ತು ಉ) ನೀರಸಂದ್ರದಲ್ಲಿ (ಹುಬ್ಬಳ್ಳಿ ಹತ್ತಿರ) ಇದ್ದಂತಹ ಹಳೇ ಡೀಸೆಲ್ ವಿದ್ಯುಚ್ಛಕ್ತಿ ಜನಕ ಯಂತ್ರವನ್ನು ಬೇತಮಂಗಲಕ್ಕೆ ಸ್ಥಳಾಂತರಿಸಲಾಗಿದೆ. ಈ ಯಂತ್ರವನ್ನು ಕಾರ್ಯಾಚರಣೆಗೆ ಸಿದ್ಧಗೊಳಿಸಲು ವ್ಯಾಪಕ ರಿಪೇರಿಗಾಗಿ ಸಾಕಷ್ಟು ಹಣ ಬೇಕಾಗುತ್ತದೆ. ಈ ಅಂಶಗಳನ್ನು ಗಮನದಲ್ಲಿಟ್ಟು ಕೆ.ಇ.ಬಿ. ಇಂದ ಸಮರ್ಪಕ ವಿದ್ಯುಚ್ಛಕ್ತಿ ವ್ಯವಸ್ಥೆ ಮಾಡುವುದು ಉಚಿತ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಟಿ. ಎಸ್. ಮಣಿ —ಮಾನ್ಯ ಅಧ್ಯಕ್ಷರೇ, ಇಲ್ಲಿ ಜನರೇಟರ್ ಮಿಸ್ಟೇಕ್ ಇದೆ ಎಂದು ಉತ್ತರದಲ್ಲಿ ಹೇಳುತ್ತಾರೆ. ಅಲ್ಲಿ ಪಂಪ್ ಸೆಟ್ ರಿಪೇರಿ ಮಾಡುವುದಕ್ಕೆ ಸ್ಪೇರ್ ಪಾರ್ಟ್ಸ್ ಸಿಗುವುದಿಲ್ಲ ಎಂದು ನಮ್ಮ ಇಂಜಿನಿಯರ್ಸ್ ಹೇಳುತ್ತಾರೆ. ಕೆರೆಯಲ್ಲಿ ನೀರು ಇದೆ. ನೀರನ್ನು ಸಪ್ಲೈ ಮಾಡುವುದಕ್ಕೆ ಗವರ್ನಮೆಂಟ್‌ನಿಂದ ಪ್ರಾಪರ್ ಆಕ್ಷನ್ ತೆಗೆದುಕೊಳ್ಳಬೇಕು. ನೀರು ಇಲ್ಲದಿದ್ದರೆ ಪರವಾಗಿಲ್ಲ. ನೀರು ಇದ್ದರೂ ಸಹ ಸಪ್ಲೈ ಮಾಡಂವುದಿಲ್ಲ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಅಲ್ಲಿನ ಜನರಿಗೆ ನೀರನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

SRI R. V. DESHAPANDE.—Sir, I admit that there has been serious scarcity of drinking water in K.G.F. ಒಂದು ಕೋಟಿ ೨೫ ಲಕ್ಷ ರೂಪಾಯಿಗಳನ್ನು ಕೆ.ಜಿ.ಎಫ್. ಮುನಿಸಿಪಾಲಿಟಿಯವರು ವಾಟರ್ ಬೋರ್ಡ್‌ಗೆ ಕೊಡಬೇಕಾಗಿತ್ತು. ಇವ್ಹಾವರೂ ಸಹ ಬೋರ್‌ವೆಲ್ ಹಾಕಿ ನೀರನ್ನು ಕೊಡಂವುದಕ್ಕೆ ಪ್ರಯತ್ನ ಮಾಡಿದ್ದೇವೆ. ಡೀಸೆಲ್ ಜನರೇಟರ್ ಅನ್ನು ರಿಪೇರಿ ಮಾಡಿಸಬೇಕು. ಇದಕ್ಕೆ ಮೂರರಿಂದ ನಾಲ್ಕು ಲಕ್ಷ ರೂಪಾಯಿಗಳ ಹಣ ಬೇಕಾಗುತ್ತದೆ. ಮುನಿಸಿಪಾಲಿಟಿಯವರು ಹಣ ತುಂಬಬೇಕು. ನಾವು ಕೊಡುವ ಹಾಗಿಲ್ಲ. ಆದರೂ ಸಹ ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತೇನೆ, ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.